**ದಿನಾಂಕ 05.07.2022 ರಂದು ಸಾಕ್ಷಿಗೆ ಪ್ರಮಾಣ ವಚನವನ್ನು ಬೋಧಿಸಲಾಯಿತು.**

**ಮುಂದುವರೆದ ಪಾಟೀಸವಾಲುಃ ಶ್ರೀ ಕೆ.ಯು. ವಕೀಲರಿಂದಃ**

1. ಪ್ರಸನ್ನ ಕುಮಾರ್ ರವರಿಗೆ ತಾವರೇಕೆರೆಯಲ್ಲಿ ದಾವಾ ಐಟಂ ನಂ.1 ಮತ್ತು 2 ನಮ್ಮ ಊರಿನ ವಡ್ಡರಹಟ್ಟಿಯ ಪಕ್ಕ ಇದೆ ಎಂದರೆ ಸರಿ. ಸದರಿ ಜಮೀನುಗಳನ್ನು ಪ್ರಸನ್ನ ಕುಮಾರ್ ರವರು ಅನುಭವಿಸುತ್ತಿದ್ದರು ಹಾಗಾದರಿಂದ ಅವರ ಕುಟುಂಬದ ಬಗ್ಗೆ ಊರಿನಲ್ಲಿ ಎಲ್ಲರಿಗೂ ಚೆನ್ನಾಗಿ ಪರಿಚಯ ಎಂದರೆ ಸರಿ. ನಮ್ಮ ವಡ್ಡರಟ್ಟಿಯಲ್ಲಿ ಸಾಕಷ್ಟು ಜನ ಪ್ರಸನ್ನಕುಮಾರ್ ರವರ ಜಮೀನಿನಲ್ಲಿ ಕೆಲಸಕ್ಕೆ ಹೋಗುತ್ತಾರೆ ಎಂದರೆ ಸಾಕ್ಷಿ ನಾನೇ ಮಾಡಿಸುತ್ತಿದ್ದೆ ಮತ್ತು ಸುತ್ತಮುತ್ತಲಿನ ಜನಗಳೂ ಸಹ ಕೆಲಸಕ್ಕೆ ಬರುತ್ತಿದ್ದರು ಎಂದು ನುಡಿಯುತ್ತಾರೆ. ಪ್ರಸನ್ನಕುಮಾರ್ ಮತ್ತು ಅವರ ಹೆಂಡತಿ ಕೃಷ್ಣವೇಣಿ ಯವರ ಕುಟುಂಬದ ಬಗ್ಗೆ ನನಗೆ ಮತುತ ನಮ್ಮ ಮಕ್ಕಳಿಗೆ ಚೆನ್ನಾಗಿ ಗೊತ್ತು ಎಂದರೆ ಸರಿ, ನಾವು ಒಟ್ಟು ಕುಟುಂಬದಲ್ಲಿ ಇದ್ದೆವು ಎಂದು ಸಾಕ್ಷಿ ಮುಂದುವರೆದು ನುಡಿಯುತ್ತಾರೆ. ನಾವು ಒಟ್ಟು ಕುಟುಂಬದಲ್ಲಿ ಇದ್ದೆವು ಎಂದು ತೋರಿಸಲು ದಾಖಲಾತಿಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ನನಗೆ ತೊಂದರೆ ಇಲ್ಲ. ಅವರನ್ನು ನಾನೇ ಸಾಕಿರುತ್ತೇನೆ. ದಾವಾ ಐಟಂ ನಂ.1 ರಿಂದ 4 ಪ್ರಸನ್ನ ಕುಮಾರ್ ರವರಿಗೆ ಸೇರಿದ ಮನೆ ಮತ್ತು ಜಮೀನು ಎಂಬ ಪ್ರಶ್ನೆಗೆ ಸಾಕ್ಷಿಯು ನಾನು ಮತ್ತು ನಮ್ಮ ಯಜಮಾನರು ಸಂಪಾದಿಸಿದ ಸ್ವತ್ತುಗಳು ಎಂದು ನುಡಿಯುತ್ತಾರೆ.

2. ಮಂಜುನಾಥ, ಆಂಜನೇಯಮೂರ್ತಿ ಮತ್ತು ಅಮರೇಶ್ ಇವರುಗಳು ಪ್ರತ್ಯೇಕವಾಗಿ ವಾಸ ಮಾಡಿಕೊಂಡು ಪ್ರತ್ಯೇಕ ವ್ಯವಹಾರ ಮಾಡುತ್ತಿದ್ದಾರೆ ಎಂಬ ಪ್ರಶ್ನೆಗೆ ಸಾಕ್ಷಿಯು ನಾನು ನನ್ನ ಗಂಡ ದುಡಿದ ಆಸ್ತಿಗಳಲ್ಲಿ ವ್ಯವಹಾರ ಮಾಡುತ್ತಿದ್ದಾರೆ ಎಂದು ನುಡಿಯುತ್ತಾರೆ. ದಾವಾ ಐಟಂ ನಂ.6 ರ ಸ್ವತ್ತಿನಲ್ಲಿ **ಪವನ್ ಡಿಸ್ಟ್ರಿಬ್ಯೂಟರ್** ಎಂಬ ವ್ಯಾಪಾರ ಮಾಡುತ್ತಿದ್ದಾರೆ ಎಂಬ ಪ್ರಶ್ನೆಗೆ ಸಾಕ್ಷಿಯು ನಾನು ನನ್ನ ಗಂಡ ದುಡಿದ ಆಸ್ತಿಗಳಲ್ಲಿ ವ್ಯವಹಾರ ಮಾಡುತ್ತಿದ್ದಾರೆ ಎಂದು ನುಡಿಯುತ್ತಾರೆ. ದಾವಾ ಐಟಂ ನಂ. 6 ಮತ್ತು 7 ರ ಆಸ್ತಿಗಳನ್ನು ಮಂಜುನಾಥ, ಆಂಜನೇಯಮೂರ್ತಿ ಯವರು ಇತ್ತೀಚೆಗೆ ದುಡಿದ ಹಣದಿಂದ ಕೊಂಡುಕೊಂಡಿದ್ದಾರೆ ಎಂದರೆ ಸರಿಯಲ್ಲ. ದಾವಾ ಐಟಂ ನಂ. 9 ಮತ್ತು 10 ರ ಆಸ್ತಿಗಳನ್ನು ಆಂಜನೇಯಮೂರ್ತಿ

ಯವರು 4 ನೇ ಪ್ರತಿವಾದಿ ಪ್ರಮೀಳ ರವರ ಹೆಸರಿನಲ್ಲಿ ಬ್ಯಾಂಕಿನಲ್ಲಿ ಲೋನ್ ತೆಗೆದುಕೊಂಡು ಖರೀದಿಸಿದ್ದಾರೆ ಎಂದರೆ ಸರಿಯಲ್ಲ.

3. ನಮ್ಮ ಯಜಮಾನರು ತಿಮ್ಮಾಭೋವಿಯಾಗಿದ್ದು, ಪ್ರಸನ್ನ ಕುಮಾರ್ ಎಂದರೆ ಅಲ್ಲ ಎಂದರೆ ಸರಿಯಲ್ಲ. ಪ್ರಸನ್ನಕುಮಾರ್ ನನ್ನ ಯಜಮಾನರಲ್ಲ ಮತ್ತು ನಮ್ಮ ಯಜಮಾನರು ಯಾವುದೇ ದಾವಾ ಸ್ವತ್ತುಗಳನ್ನು ಖರೀದಿಸಿಲ್ಲ ಎಂದರೆ ಸರಿಯಲ್ಲ. ನಿ.ಪಿ.3 ನ್ಯಾಯಾಲಯಕ್ಕೆ ಹಾಜರುಪಡಿಸಿರುವ ವಂಶವೃಕ್ಷ ನಾನೇ ಸೃಷ್ಟಿಸಿ ಹಾಜರುಪಡಿಸಿರುವ ದಾಖಲೆ ಎಂದರೆ ಸರಿಯಲ್ಲ. ನಿ.ಪಿ.3 ದಾಖಲಾತಿಯಲ್ಲಿ ಪ್ರಸನ್ನಕುಮಾರ್ ರವರ ಹೆಂಡತಿ ಕೃಷ್ಣವೇಣಿ ಮತ್ತು 1 ರಿಂದ 3 ನೇ ಪ್ರತಿವಾದಿಗಳು ಮಕ್ಕಳು ಎಂದು ಕಾಣಿಸಿದ್ದು ಅವರಿಗೆ ಒಬ್ಬಳೇ ಹೆಂಡತಿ ಕೃಷ್ಣವೇಣಿಯಾಗಿದ್ದು ನಾನಾಗಲೀ ನನ್ನ ಮಗನಾಗಲೀ ಪ್ರಸನ್ನಕುಮಾರ್ ರವರ ಹೆಂಡತಿ ಮತ್ತು ಮಕ್ಕಳಲ್ಲ ಎಂದರೆ ಸರಿಯಲ್ಲ. ನಿ.ಪಿ.3 ರ ದಾಖಲಾತಿಯನ್ನು ಉದ್ದೇಶಪೂರ್ವಕವಾಗಿ ಸೃಷ್ಟಿಸಿದ್ದೇನೆ ಎಂದರೆ ಸರಿಯಲ್ಲ.

4. ನಿ.ಪಿ.5 ರ ದಾಖಲಾತಿಯಲ್ಲಿ ನನ್ನ ಗಂಡನ ಹೆಸರು ತಿಮ್ಮಾಭೋವಿ ಎಂಬ ಹೆಸರನ್ನು ಪ್ರಸನ್ನಕುಮಾರ್ ಎಂಬ ಹೆಸರಿಗೆ ತಿದ್ದುಪಡಿ ಮಾಡಿಸಿಕೂಂಡಿದ್ದೇನೆ ಎಂದರೆ ಸರಿಯಲ್ಲ. ನಿ.ಪಿ.6 ರಿಂದ 9 ರ ದಾಖಲಾತಿಗಳೂ ಸಹ ಇತ್ತೀಚೆಗೆ ಸೃಷ್ಟಿಮಾಡಿಸಿದ ದಾಖಲಾತಿ ಎಂದರೆ ಸರಿಯಲ್ಲ. ನಿ.ಪಿ.10 ರಿಂದ 14 ರ ದಾಖಲಾತಿಗಳು ಸುಳ್ಳು ದಾಖಲಾತಿಗಳು ಹಾಗೂ ತಿಮ್ಮಾಭೋವಿ ಹೆಸರಿನಿಂದ ಪ್ರಸನ್ನಕುಮಾರ್ ಎಂಬ ಹೆಸರಿಗೆ ಬದಲಾಯಿಸಿದ್ದೇವೆ ಎಂದರೆ ಸರಿಯಲ್ಲ. ನಿ.ಪಿ.15 ನ್ನು ನನ್ನ ಮಗ ನಿಜವಾದ ತಂದೆಯಾದ ತಿಮ್ಮಾಭೋವಿಯನ್ನು ತಂದೆ ಎಂದು ತೋರಿಸಿದ್ದರೂ ಸಹ ಅದನ್ನು ಬದಲಾಯಿಸಿ ಪ್ರಸನ್ನಕುಮಾರ್ ಎಂದು ನನ್ನ ಮಗ ಸೃಷ್ಟಿಸಿದ್ದಾನೆ ಎಂದರೆ ಸರಿಯಲ್ಲ.

5. ನಿ.ಪಿ. 16 ರಿಂದ 18 ರ ದಾಖಲಾತಿಯಲ್ಲಿರುವ ಫೋಟೊಗಳನ್ನು ಯಾವ ದಿನಾಂಕದಂದು ನಿರ್ಧಿಷ್ಟವಾಗಿ ತೆಗೆಸಲಾಗಿತ್ತು ಎಂದರೆ ಸಾಕ್ಷಿಯು ನನ್ನ ಬದುಕಿದ್ದಾಗ ತೆಗೆಸಲಾಗಿತ್ತು ಸರಿಯಾದ ದಿನಾಂಕ ನನಗೆ ನೆನಪಿಲ್ಲ. ಸುಮಾರು ಎಷ್ಟು ವರ್ಷಗಳ ಹಿಂದೆ ಫೋಟೋಗಳನ್ನು ತೆಗೆಸಲಾಗಿದೆ ಎಂಬ ಪ್ರಶ್ನೆಗೆ ಸಾಕ್ಷಿಯು ನಮ್ಮ ಮಗನಿಗೆ ತಿಳಿದಿದೆ ಎಂದು ನುಡಿಯುತ್ತಾರೆ. ಆಧಾರ್ ಕಾರ್ಡ್ ಮತ್ತು ಎಲ್ಲಾ ದಾಖಲಾತಿಗಳನ್ನು ನನ್ನ ಮಗ ಮಾಡಿಸಿದ್ದಾನೆ ಎಂದರೆ

ಸರಿಯಲ್ಲ, ಅದನ್ನು ನಾನು ಮಾಡಿಸಿರುತ್ತೇನೆ. ನಿ.ಪಿ. 16 ರಿಂದ 18 ರ ದಾಖಲಾತಿಯಲ್ಲಿರುವ ಫೋಟೊಗಳನ್ನು ದೇವಸ್ಥಾನದಲ್ಲಿ ತೆಗೆಸಲಾಗಿದೆ ಯಾರು ತೆಗೆದಿದ್ದರು ನನಗೆ ಗೊತ್ತಿಲ್ಲ. ತಾವರೇಕೆರೆ ಸ್ಟುಡಿಯೋ ದವರ ಸದರಿ ಫೊಟೋಗಳನ್ನು ಕೊಟ್ಟಿರುತ್ತಾರೆ. ಅವರ ಹೆಸರು ನನಗೆ ಗೊತ್ತಿಲ್ಲ. ತುಳಸಿ ಗಿಡದ ಬಳಿ ತೆಗೆದಿರುವ ಫೊಟೋವನ್ನು ಬಸವರಾಜ್ ಎನ್ನುವವರು ಕೊಟ್ಟಿರುತ್ತಾರೆ.

6. ಸಿ.ಡಿ. ಯನ್ನು ಯಾವಾಗ ಮಾಡಲಾಗಿದೆ ಎಂದು ನನಗೆ ಗೊತ್ತಿಲ್ಲ. ಬಸವರಾಜು ರವರು ಇದ್ದಾರೆ. ಅವರನ್ನು ದಾವೆಯಲ್ಲಿ ಸಾಕ್ಷಿಯಾಗಿ ಕರೆತರಲು ತೊಂದರೆ ಇದೆಯೇ ಎಂಬ ಪ್ರಶ್ನೆಗೆ ಸಾಕ್ಷಿಯು ಕರೆಸುತ್ತೇನೆ ಎಂದು ನುಡಿಯುತ್ತಾರೆ. ನಿ.ಪಿ.16 ರಿಂದ 18 ರ ದಾಖಲಾತಿಯಲ್ಲಿರುವ ಫೋಟೊಗಳಿಗೆ ರಸೀದಿಗಳು ಇಲ್ಲ. ಸದರಿ ಫೊಟೋಗಳು ಮತ್ತು ಸಿ.ಡಿ.ಯನ್ನು ನಾನು ನನ್ನ ಮಗ ಸೃಷ್ಟಿಮಾಡಿಕೊಂಡಿದ್ದೇವೆ ಎಂದರೆ ಸರಿಯಲ್ಲ.

7. ನಾನು ದಾವೆಯಲ್ಲಿ ಪ್ರಸನ್ನಕುಮಾರ್ ರವರ ಹೆಂಡತಿ ಮತ್ತು 2 ನೇ ವಾದಿ ಅವರ ಮಗ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಮಗ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಲು ತೊಂದರೆ ಇಲ್ಲ ಎಂದರೆ ಸರಿಯಲ್ಲ. ನಾನು ದಾವೆಯಲ್ಲಿ ಹೇಳಿರುವ ಎಲ್ಲಾ ವಿಷಯಗಳು ಸುಳ್ಳು ಎಂದರೆ ಸರಿಯಲ್ಲ. ನಾನು ಯಜಮಾನರು ಯಾವುದೇ ಆಸ್ತಿಯನ್ನು ಸಂಪಾದನೆ ಮಾಡಿಲ್ಲ ಎಂದರೆ ಸರಿಯಲ್ಲ. ನನಗೆ ಪ್ರಸನ್ನಕುಮಾರ್ ರವರು ರಂಗನಾಥ ಸ್ವಾಮಿ ದೇವಸ್ಥಾನದಲ್ಲಿ ಮಾಂಗಲ್ಯ ಧಾರಣೆ ಮಾಡಿದ್ದಾರೆ ಮತ್ತು ನನ್ನ ಜೊತೆ ಸಂಸಾರ ನಡೆಸುತ್ತಿದ್ದಾರೆ ಎಂದು ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ.

**8.** ಪ್ರತಿವಾದಿ 1 ರಿಂದ 4 ರವರ ಆಸ್ತಿಯನ್ನು ಲಪಟಾಯಿಸಲು ನಾನು ಮತ್ತು ನನ್ನ ಮಗ ಸೇರಿ ಸುಳ್ಳು ದಾಖಲಾತಿಗಳನ್ನು ಸೃಷ್ಟಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇವೆ ಎಂದರೆ ಸರಿಯಲ್ಲ. ನಾನು ಮತ್ತು ನನ್ನ ಮಗ 1 ರಿಂದ 4 ಪ್ರತಿವಾದಿಗಳಿಗೆ ಸಂಬಂಧಿಕರೂ ಅಲ್ಲ ದಾವಾ ಆಸ್ತಿಯಲ್ಲಿ ನನಗೆ ಹಕ್ಕು ಮತ್ತು ಸ್ವಾಧೀನತೆ ಇಲ್ಲ ಎಂದರೆ ಸರಿಯಲ್ಲ. ನಾನು ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ

(ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಕಂಪ್ಯೂಟರ್ ಗೊಳಿಸಿ ದಾಖಲಿಸಿ ಪ್ರಿಂಟ್ ತೆಗೆಯಲಾಯಿತು)

**ಓದಿ ಹೇಳಿ ಕೇಳಿ ಸರಿ ಇದೆ,**

**ಹಿರಿಯ ಸಿ.ಜೆ. ಮತ್ತು ಜೆ.ಎಂ.ಎಫ್.ಸಿ, ಶಿರಾ.**